Leave to introduce

SRI S.M. YAHYA (Minister for Higher Education and Wakf):– I beg to move.

"That leave be granted to introduce the Karnataka Prohibition of Admission of Students to the Un–recognised and Un–affiliated Educational Institutions Bill, 1992."

MADAM DEPUTY SPEAKER: The question is:

"That leave be granted to introduce the Karnataka Prohibition of Admission of Students to the Un–recognised and Un–affiliated Educational Institutions Bill, 1992."

The motion was adopted and leave was granted.

SRI S.M. YAHYA (Minister for Higher Education and Wakf):– I introduce the Karnataka Prohibition of Admission of Students to the Un–recognised and Un–affiliated Educational Institutions Bill, 1992.

MADAM DEPUTY SPEAKER: –The Bill is introduced.*

ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ – 1992

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಚೌಡಾ ರೆಡ್ಡಿ (ನಗರಾಭಿವೃದ್ಧಿ ಸಚಿವರು):– ಮಾನ್ಯ ಉಪಾಧ್ಯಕ್ಷರೇ,

"ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ – 1992"

ಅದನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ "ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ–1992ವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಚೌಡಾ ರೆಡ್ಡಿ (ನಗರಾಭಿವೃದ್ಧಿ ಸಚಿವರು):– ಮಾನ್ಯ ಉಪಾಧ್ಯಕ್ಷರೇ, "ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ–1992" ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ. *

1992ನೇ ಇಸವಿಯ ಕರ್ನಾಟಕ ಸರಕುಗಳ ಮೇಲಿನ ತೆರಿಗೆಗಳ (ತಿದ್ದುಪಡಿ) ವಿಧೇಯಕ.

* ಅನುಬಂಧ

* ಅನುಬಂಧ

ಪರ್ಯಾಲೋಚನ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):– 1992ನೇ ಸಾಲಿನ ಕರ್ನಾಟಕ ಸರಕುಗಳ ಮೇಲಿನ ತೆರಿಗೆ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಸಿ. ಬೈರೇಗೌಡ:– ದಯವಿಟ್ಟು ಇದರ ಬಗ್ಗೆ ವಿವರವನ್ನು ಕಳುಹಿಸಿಕೊಡಿ. ಅವರು ಚರ್ಚೆಗೆ ಬಂದಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಎಂಟರಿ ಟ್ಯಾಕ್ಸ್‌ನಲ್ಲಿ ಕೆಲವು ಐಟಂಗಳನ್ನು ಸೇರಿಸಬೇಕೆಂದು ಬಹಳ ವರ್ಷಗಳ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ಹೋಗಿತ್ತು ಅದು ಅನುಮೋದನೆಯಾಗಿ ಬರುವಾಗ ತಡವಾಗಿದೆ. ಅದನ್ನು ಈಗ ಮಂಡಿಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇದರ ಬಗ್ಗೆ ವಿವರಣೆಯನ್ನು ಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ಏನು ಮಾನ್ಯ ಮುಖ್ಯಮಂತ್ರಿಗಳು ಬಿಲ್ಲನ್ನು ಮಂಡಿಸಿದ್ದಾರೆ; ಅದರ ಬಗ್ಗೆ ಒಂದು ಎಚ್ಚರಿಕೆಯನ್ನು ನಾನು ಕೊಡುತ್ತಿದ್ದೇನೆ. ಅದು ಏನೆಂದರೆ 103 ಐಟಂಗಳು ಇನ್‌ಕ್ಲೂಡ್ ಆಗಿದೆ. ಹಿಂದೆ ಇದನ್ನು ಕೇಂದ್ರಕ್ಕೆ ಕಳುಹಿಸಿದ್ದುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರೆಸಿಡೆಂಟ್ ಆದೇಶದ ಮೇಲೆ ತಾವು ತಂದಿರಿ, ನಾನು ನಿಮಗೆ ಏನು ಸಲಹೆ ಮಾಡುತ್ತಿದ್ದೇನೆಂದರೆ 103 ಐಟಂಗಳು ಇಲ್ಲಿ ಏನು ಇದೆ ಇವುಗಳಲ್ಲಿ ಕೆಲವು ಐಟಂಗಳ ಮೇಲೆ ಎಂಟರಿ ಟ್ಯಾಕ್ಸ್ ಹಾಕಬೇಕೆಂದು ಇಲ್ಲ. ಹಾಗಾಗಿ ಎಲ್ಲಿ ಕಾಟೇಜ್ ಇಂಡಸ್ಟ್ರೀಸ್ ಇವೆ, ಎಲ್ಲೆಲ್ಲಿ ನೇರವಾಗಿ ರೈತರ ಮೇಲೆ ಪರಿಣಾಮವಾಗುತ್ತದೆ. ಉದಾಹರಣೆಗೆ ಫುಟ್‌ವೇರ್ ಇದೆ, ಕಾಯರ್ ಪ್ರೊಡೆಕ್ಟ್ಸ್ ಇದೆ ಇದರ ಮೇಲೆ ಎಂಟರಿ ಟ್ಯಾಕ್ಸ್ ಹಾಕಿದರೆ ಜನರಿಗೆ ಬಹಳ ಕಷ್ಟವಾಗುತ್ತದೆ. ತಾವು ಇದನ್ನು ಇಂಟ್ರಡ್ಯೂಸ್ ಮಾಡಿದರೂ ಸಹ ತಾವು ಇದರ ಬಗ್ಗೆ ಪುನರ್ ಪರಿಶೀಲನೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ 103 ಐಟಂ ಯಾವುದಾದರೊಂದು ನಾವು ಬ್ಯಾಗ್‌ನಲ್ಲಿ ತೆಗೆದುಕೊಂಡು ಹೋದರೂ ಟ್ಯಾಕ್ಸ್ ಹಾಕಬಹುದು. Everything is covered. You have to be very cautious. ಏನು ಈಗ ರಾಜ್ಯದಲ್ಲಿ ಉತ್ಪಾದನೆಯಾಗುತ್ತದೆ ಇದರೊಳಗೆ ಎಲ್ಲಾ ಕವರ್ ಆಗಿದೆ. ಹಾಗಾಗಿ ಜನರಿಗೆ ಹೆರಾಸ್‌ಮೆಂಟ್ ಆಗಬಾರದು. ಸಾಮಾನ್ಯ ಜನರಿಗೆ ಇದರಿಂದ ಯಾವುದೇ ತರಹ ಹೆರಾಸ್‌ಮೆಂಟ್ ಆಗಬಾರದು ಅನ್ನುವುದು ಒಂದು. ಮತ್ತೊಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಬಜೆಟ್‌ನಲ್ಲಿ ಟ್ಯಾಕ್ಸ್ ಹಾಕುತ್ತೀರಿ, ಬಜೆಟ್ ಬರುವುದಕ್ಕಿಂತ ಮುಂಚೆ ಆ ಟ್ಯಾಕ್ಸ್ ಅನ್ನು ವಿತ್‌ಡ್ರಾ ಮಾಡುವುದು ಅಥವಾ ಟ್ಯಾಕ್ಸ್ ಕಡಿಮೆ ಮಾಡುವುದು ಸರಿಯಲ್ಲ. ಟ್ಯಾಕ್ಸ್ ಹಾಕುವುದಕ್ಕಿಂತ ಮೊದಲು ವಿಚಾರ ಮಾಡಬೇಕು. ಟ್ಯಾಕ್ಸ್ ಹಾಕಿದ ನಂತರ ಬಜೆಟಿನಲ್ಲಿ ಡಿಸ್‌ಕಷನ್ ಆದ ನಂತರ ಬೇಕಾದರೆ ಮಾಡಿ. ಡಿಸ್‌ಕಷನ್ ಆಗುತ್ತದೆ ಹೆಚ್ಚುಕಡಿಮೆಯಾಗುತ್ತದೆ. ಆದರೆ ಡಿಸ್‌ಕಷನ್ ಆಗಿ ಬಿಲ್ಲು ಆದ ನಂತರ ಮುಂದಿನ ಬಜೆಟ್ ಬರುವುದಕ್ಕಿಂತ ಮುಂಚೆ ಕಡಿಮೆ ಮಾಡಿದರೆ ಅದನ್ನು ಇಂಟೆನ್‌ಷನಲಿ ಎಂದು ಹೇಳಬೇಕಾಗುತ್ತದೆ. ಈ ರೀತಿ ಆಗಬಾರದು. ತಾವು 103 ಐಟಂಗಳಿಗೆ ಟ್ಯಾಕ್ಸ್ ಹಾಕುವಾಗ ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

5.35 ಪಿ.ಎಂ.

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಿಲ್ಲನ್ನು ಮಂಡಿಸಿದ್ದಾರೆ. ಅವರು ಕೊಟ್ಟಂತಹ ವಿವರಣೆ ಏನು ಅಂದರೆ ಇದು ಹಿಂದೆ ಆಗಿತ್ತು,

ಅದನ್ನು ರಾಷ್ಟ್ರಾಧ್ಯಕ್ಷರಿಗೆ ಕಳುಹಿಸಿದ್ದೆವು, ಅವರಿಂದ ಬರತಕ್ಕದ್ದು ತಡವಾಗಿದೆ, ಆದ್ದರಿಂದ ಪುನಃ ನಾವು ಇಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಹಿಂದೆ ಈ ಪಟ್ಟಿಯಲ್ಲಿ ಯಾವ್ಯಾವ ಸರಕುಗಳನ್ನು ಸೇರಿಸಿತ್ತೋ ಅವತ್ತಿನ ದಿವಸಕ್ಕೆ ಅದು ಅವಶ್ಯಕತೆ ಇರಬಹುದು. ಇದನ್ನು ಬಹಳ ಹಿಂದೆಯೇ ಒಪ್ಪಿಗೆ ಕೊಟ್ಟಿರತಕ್ಕಂಥದ್ದು. ಹೌದು, ಬಜೆಟ್‌ನಲ್ಲಿ ಹಿಂದೆಯೇ ಸೇರಿಸಿದ್ದಾರೆ ಅದರಿಂದ ಆದಾಯ ಬರುತ್ತದೆ ಎನ್ನತಕ್ಕಂಥ ನಿರೀಕ್ಷೆಯನ್ನು ಮಾಡಿಕೊಂಡಿದ್ದಾರೆ. ಅದು ನಿಜ, ಇವತ್ತು ಯಾವ ಸರಕುಗಳ ಮೇಲೆ ಟ್ಯಾಕ್ಸ್ ಅನ್ನು ವಿಧಿಸಬೇಕಾಗಿತೋ ಅವತ್ತಿನ ಪರಿಸ್ಥಿತಿಗೆ ಅದು ಸರಿ ಇರಬಹುದು. ಆದರೆ ಇವತ್ತಿನ ಪರಿಸ್ಥಿತಿಗೆ ಸರಿಯಲ್ಲ. ಸುಮಾರು ನೂರು ಚಿಲ್ಲರೆಯನ್ನು ಪಟ್ಟಿಯಲ್ಲಿ ಸೇರಿಸಿದ್ದಾರೆ ಇದರಲ್ಲಿ ಬಹಳಷ್ಟು ಕೈಬಿಡಬೇಕಾಗತಕ್ಕ ಅವಶ್ಯಕತೆ ಇದೆ. ಉದಾಹರಣೆಗೆ ನಾನು ಹೇಳುತ್ತೇನೆ. ನೀರಾವರಿಗೆ ಉಪಯೋಗಿಸತಕ್ಕ ಕೊಳವೆ ಪೈಪುಗಳು ಮತ್ತು ಸಲಕರಣೆಗಳು ಇವೆಲ್ಲಕ್ಕೂ ಟ್ಯಾಕ್ಸ್ ಬೀಳತಕ್ಕ ಪರಿಸ್ಥಿತಿ ಇದೆ. ದೇಶದಲ್ಲಿ ದಿವಸ ನೀರು ಬಹಳ ಸ್ಕೇರ್ ಕಮಾಡಿಟಿ ಆಗಿದೆ. ಪ್ರತಿಯೊಂದು ಹನಿ ನೀರನ್ನು ಬಳಕೆ ಮಾಡಿಕೊಳ್ಳಬೇಕಾದರೆ ಅದಕ್ಕೆ ಬಹಳ ಶ್ರದ್ಧೆಯನ್ನು ವಹಿಸಬೇಕು. ಅದಕ್ಕೆ ಎಲ್ಲರೂ ಪ್ರೋತ್ಸಾಹ ಕೊಡಬೇಕು; ಆಧುನಿಕವಾದಂತಹ ನೀರಾವರಿ ಪದ್ಧತಿ ಏನಿದೆ ಅದಕ್ಕೆ ಪ್ರೋತ್ಸಾಹ ಮಾಡತಕ್ಕದ್ದು ನಮ್ಮ ಕರ್ತವ್ಯವಾಗಿದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ಈ ಜಿನುಗು ನೀರಾವರಿಯಲ್ಲಿ ಉಪಯೋಗಿಸತಕ್ಕಂಥ ಸಲಕರಣೆಗಳು ಏನಿವೆ, ಇವುಗಳ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ನಾವು ಸುಂಕವನ್ನು ಹೇರುತ್ತೇವೆ ಎಂದರೆ, ಇದಕ್ಕೆ ಏನು ಅರ್ಥ ? ಒಂದು ಕಡೆ ನಾವು ಅದಕ್ಕೆ ಉತ್ತೇಜನ ಕೊಡಬೇಕು ಎಂದು ಹೇಳುವಾಗ, ಮತ್ತೊಂದು ಕಡೆ ಅದನ್ನು ಮೊಟಕು ಮಾಡುವ ಪ್ರಯತ್ನ ಕೂಡ ಇವತ್ತಿನ ದಿವಸ ನಡೆಯುತ್ತಿದೆ. ಆದ್ದರಿಂದ ನಾನು ಇಂತಹ ಸರಕು ಸಲಕರಣೆಗಳು ಏನಿವೆ, ಅದರಲ್ಲೂ ಪ್ರಾಮುಖ್ಯವಾಗಿ ಈ ವ್ಯವಸಾಯದಲ್ಲಿ ಉಪಯೋಗವಾಗುವಂಥಾದ್ದು, ಒಂದು ಉದಾಹರಣೆಯನ್ನು ಮಾತ್ರ ನಾನು ಕೊಟ್ಟಿದ್ದೇನೆ. ವ್ಯವಸಾಯದಲ್ಲಿ ಉಪಯೋಗಿಸತಕ್ಕಂಥ ಪ್ರತಿಯೊಂದರ ಮೇಲೆ, ಒಂದಲ್ಲ ಒಂದು ರೀತಿಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸುಂಕ ಹಾಕುವಂಥ ಪ್ರಯತ್ನ ನಡೆದಿದೆ. ಅದಕ್ಕೆ ಒಂದು ಉದಾಹರಣೆಯನ್ನು ನಾನು ಕೊಟ್ಟಿದ್ದೇನೆ. ಅದೇ ರೀತಿ ಇವತ್ತಿನ ದಿವಸ ವಿದ್ಯುತ್ ಸಲಕರಣೆಗಳ ಮೇಲೂ ಸಹ ಈ ರೀತಿಯಾದಂಥ ಟ್ಯಾಕ್ಸ್ ಹಾಕತಕ್ಕಂಥಾದ್ದು ಇದೆ. ಇದನ್ನೆಲ್ಲಾ ವಿಚಾರ ಮಾಡಬೇಕಾದಂಥ ಅವಶ್ಯಕತೆ ಇದೆ. ಇದು ಹಿಂದೆ ಆಗಿರತಕ್ಕಂಥಾದ್ದು ಈಗ ನಾವು ಮಾಡುತ್ತೇವೆ ಅಂದರೆ ಅದು ಸರಿಯಾದ ವಾದ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮತ್ತೊಂದು ವಿಷಯ, ಬರುವ ಫೆಬ್ರುವರಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯವನ್ನು ಮಂಡಿಸುವವರಿದ್ದಾರೆ. ನಾನು ಒಂದು ವಿಷಯವನ್ನು ಅನೇಕ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೆ. ಅದೇನೆಂದರೆ, ಈಗ ನಾನೇ ಒಂದು ಕಾರನ್ನು ಕೊಂಡುಕೊಂಡೆ. ನಮ್ಮ ಕ್ಷೇತ್ರದ ಜನರು ನನಗೆ ಒಂದು ಕಾರನ್ನು ಪ್ರೆಸೆಂಟ್ ಮಾಡಿದರು. ಅದನ್ನು ಅವರು ತರಿಸಿದ್ದು ಎಲ್ಲಿಂದ ಎಂದರೆ ಪಾಂಡಿಚೇರಿಯಿಂದ. ಪಾಂಡಿಚೇರಿಗೂ ನಮಗೂ ವ್ಯತ್ಯಾಸ ಎಷ್ಟಿದೆ ಎಂದರೆ, ಒಂದು ಅಂಬಾಸಿಡರ್ ಕಾರಿನ ಮೇಲೆ ಸುಮಾರು ಹತ್ತು ಸಾವಿರ ರೂಪಾಯಿಗಳ ಟ್ಯಾಕ್ಸ್ ವ್ಯತ್ಯಾಸ ಇದೆ. ನಮ್ಮ ರಾಜ್ಯದಲ್ಲಿ ಕೊಂಡುಕೊಂಡರೆ ಹತ್ತು ಸಾವಿರ ರೂಪಾಯಿ ಜಾಸ್ತಿಯಾಗುತ್ತದೆ ಮತ್ತು ಬೇರೆ ಕಡೆಗೆ ಕೊಂಡುಕೊಂಡರೆ ಕಡಿಮೆಯಾಗುತ್ತದೆ. ಇದನ್ನು ಸರಿಪಡಿಸಿ. ನಾನು ನನ್ನದೇ ಆದ ಉದಾಹರಣೆಯನ್ನು ಕೊಟ್ಟು ಸದನದಲ್ಲಿ ಪ್ರಸ್ತಾಪ ಮಾಡಿದೆ. ಬೇರೆ ರಾಜ್ಯದಲ್ಲಿ ನಮಗಿಂತ ಕಡಿಮೆ ಟ್ಯಾಕ್ಸ್ ಇದ್ದರೆ, ಜನ ಅಲ್ಲಿಗೆ ಹೋಗುತ್ತಾರೆ. ಉದಾಹರಣೆಗೆ ಹೊಸೂರು 18 ಮೈಲಿ ದೂರದಲ್ಲಿದೆ. 18 ಮೈಲಿ ದೂರ ಹೋದರೆ ಅಲ್ಲಿ ಕಡಿಮೆ ಬೆಲೆ ಇರುತ್ತದೆ. ಇಲ್ಲಿ ಬೆಂಗಳೂರಿನಲ್ಲಿ ಕೊಂಡುಕೊಂಡರೆ ಅದೇ ಜಾಸ್ತಿ ಬೆಲೆಯಾಗುತ್ತದೆ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ, ವ್ಯಾಪಾರ ನಮ್ಮ ರಾಜ್ಯದಿಂದ ಹೊರರಾಜ್ಯಕ್ಕೆ ಹೋಗುತ್ತಿದೆ. ಆದ್ದರಿಂದ ನೀವು ಎಂಟ್ರಿ ಟ್ಯಾಕ್ಸ್ ಹಾಕತಕ್ಕಂಥ ರೂಪದಲ್ಲಿ ಅಥವಾ

ಬೇರೆ ಬೇರೆ ಟ್ಯಾಕ್ಸ್ ಹಾಕತಕ್ಕಂಥ ರೂಪದಲ್ಲಿ ನೀವು ಟ್ಯಾಕ್ಸ್‌ನ್ನು ಏರಿಸುತ್ತಾ ಏರಿಸುತ್ತಾ ಹೋದರೆ ಜನ ಇಲ್ಲಿ ಕೊಂಡು ಕೊಳ್ಳುವುದಿಲ್ಲ. ಬೇರೆ ಕಡೆಗೆ ಹೋಗಿ ಕೊಂಡುಕೊಳ್ಳುತ್ತಾರೆ. ಜೊತೆಗೆ ಇನ್ನೊಂದು ಉದಾಹರಣೆಯನ್ನು ಕೊಟ್ಟು ಹೇಳುವುದಾದರೆ, ರಾ ಸಿಲ್ಕ್ ಏನಿದೆ, ಅದರ ಹೆಚ್ಚಿನ ಉತ್ಪಾದನೆ ಆಗತಕ್ಕಂಥಾದ್ದು ನಮ್ಮ ರಾಜ್ಯದಲ್ಲೇ. ಅದರ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಟ್ಯಾಕ್ಸ್ ಹಾಕಿ ಅದರ ಕಳ್ಳತನವಾಗಿ ಅದರಿಂದ ಬರಬೇಕಾದ ಹಣ ಕೂಡ ಬರುತ್ತಿಲ್ಲ. ಕಳ್ಳತನವಾಗಿ ಬೇರೆ ಕಡೆಗೆ ಸಿಲ್ಕ್ ಹೋಗುತ್ತಿರತಕ್ಕಂಥಾದ್ದು ನಡೆಯುತ್ತಿದೆ. ಈ ದೃಷ್ಟಿಯಿಂದ ಏನೇನು ರೂಪದಲ್ಲಿ ಟ್ಯಾಕ್ಸ್ ಹಾಕುತ್ತಿದ್ದೀರಿ, ಅದು ಸರಿಯಲ್ಲ. ಇಲ್ಲಿ ಒಟ್ಟು ಟ್ಯಾಕ್ಸ್ ಏನು ಬೀಳುತ್ತದೆ, ಅದನ್ನು ಬೇರೆ ಕಡೆಗೆ ಹೋಲಿಸಿದರೆ ಕಡಿಮೆಯಿಲ್ಲದಿದ್ದರೂ, ಅದರ ಸರಿಸಮಾನವಾಗಿಯೂ ಇದ್ದರೆ ವ್ಯಾಪಾರ ನಮ್ಮ ರಾಜ್ಯಬಿಟ್ಟು ಬೇರೆ ಕಡೆಗೆ ಹೋಗುವುದಿಲ್ಲ. ಆ ಹಣ ಟ್ಯಾಕ್ಸ್ ರೂಪದಲ್ಲಿ ಬರತಕ್ಕದ್ದು ನಮಗೆ ಬರುತ್ತದೆ. ಅನೇಕ ಉದಾಹರಣೆಗಳನ್ನು ಕೊಟ್ಟು ಹೇಳಿದ್ದೇನೆ. ನಾನು ಕೊಂಡುಕೊಂಡಂಥ ಕಾರಿನ ಬಗ್ಗೆ ಹೇಳಿದ್ದೇನೆ. ನೀರಾವರಿ ಸಲಕರಣೆಗಳ ಬಗ್ಗೆ ಹೇಳಿದ್ದೇನೆ, ಮತ್ತು ರೇಷ್ಮೆ ಬಗ್ಗೆ ಕೂಡ ಹೇಳಿದ್ದೇನೆ. ಇದನ್ನು ನೀವು ತಕ್ಷಣದಲ್ಲೇ ಸರಿಪಡಿಸದೇ ಇದ್ದರೂ ಸಹ, ಬಜೆಟ್ ಮಂಡನೆ ಮಾಡತಕ್ಕಂಥ ಕಾಲದಲ್ಲಿ ಇದನ್ನು ಸರಿಪಡಿಸತಕ್ಕಂಥ ಒಂದು ಪ್ರಯತ್ನವನ್ನು ದಯವಿಟ್ಟು ಮಾಡಬೇಕು. ಇದನ್ನು ನಾನು ಸತತವಾಗಿ ಹೇಳುತ್ತಲೇ ಬಂದಿದ್ದೇನೆ. ನಾನು ಹೇಳುತ್ತಲೇ ಇರತಕ್ಕಂಥಾದ್ದು, ಇವರು ನಡೆಯುತ್ತಲೇ ಇರುವುದು, ಈ ದಾರಿಯಲ್ಲಿ ಹೋಗುತ್ತಿದೆ. ಇದನ್ನು ಕೈಬಿಟ್ಟು ಈ ರೀತಿಯಾಗಿ ನಮ್ಮಲ್ಲಿ ನಡೆಯಬೇಕಾಗಿದ್ದಂಥ ವ್ಯಾಪಾರ ಹೊರರಾಜ್ಯಕ್ಕೆ ಹೋಗುತ್ತಿದೆ. ಇದು penniwise pound foolish ಎನ್ನತಕ್ಕಂಥ ವ್ಯವಹಾರ ಆಗುತ್ತಿದೆ. ಇದನ್ನು ಬಿಟ್ಟು you become penniwise and poundwise ..... ಎನ್ನತಕ್ಕಂಥ ಸಲಹೆಯನ್ನು ಸರ್ಕಾರದ ಮುಂದಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು):– ಈ ರಾಜ್ಯದಲ್ಲಿ ಇರತಕ್ಕಂಥ ಕಾರ್ಯಾಚರಣೆ ಹೊರರಾಜ್ಯಗಳಿಗಿಂತ ಹೆಚ್ಚಿಗೆ ಆಗಿದೆ. ಈ ರಾಜ್ಯದಲ್ಲಿ ಖರೀದಿ sprinkler ಗೆ ಬೇಕಾದ ವಸ್ತುಗಳನ್ನು ಬೇರೆ ರಾಜ್ಯಗಳಿಂದ ಖರೀದಿ ಮಾಡುವುದಕ್ಕೆ ಈ ರಾಜ್ಯದ ಜನ ಈಗಾಗಲೇ ಹೋಗುತ್ತಿದ್ದಾರೆ. ವ್ಯವಸಾಯಕ್ಕೆ ಪ್ರೋತ್ಸಾಹ ಕೊಡುತ್ತೇವೆ ಎಂದು ಹೇಳುತ್ತೀರಿ. ಹನಿ ನೀರಾವರಿ ಯೋಜನೆ ಅಥವಾ ಸ್ಪ್ರಿಂಕ್ಲರ್‌ಗಳಿಗೆ ಅಥವಾ ರೇಷ್ಮೆ ಬೆಳೆಗಾರರಿಗೆ, ಇಟ್ಟಿಗೆ ಮಾಡತಕ್ಕಂಥ ಒಬ್ಬ ಸಾಮಾನ್ಯ ಕಾರ್ಮಿಕರಿಗೆ ಇಂತಹ ಪ್ರತಿಯೊಂದು ಸಣ್ಣ ಪುಟ್ಟ ವಸ್ತುಗಳ ಮೇಲೆ, ರೈತಾಪಿ ಉತ್ಪಾದನೆಗಳ ಮೇಲೆ ಕರ ಹಾಕಿ ಆಮೇಲೆ ಸಬ್ಸಿಡಿ ಕೊಡುತ್ತೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಮಹಾರಾಷ್ಟ್ರದಲ್ಲಿ ಈಗಾಗಲೇ ಕೃಷಿ ಉಪಯೋಗ ಆಗತಕ್ಕಂಥಾದ್ದರಲ್ಲಿ, ಹನಿ ನೀರಾವರಿ ಯೋಜನೆಗೆ ಡ್ರಿಪ್ ಇರಿಗೇಶನ್ ಅಂಡ್ ಸ್ಪ್ರಿಂಕ್ಲರ್‌ಗೆ ನೂರಕ್ಕೆ ಐವತ್ತರಷ್ಟು ಅಲ್ಲಿ ಸಹಾಯಧನ ಕೊಡುತ್ತಿದ್ದಾರೆ.

ಇದಕ್ಕಾಗಿ ಅಲ್ಲಿ ನೂರಕ್ಕೆ ಐವತ್ತರಷ್ಟು ಸಹಾಯಧನವನ್ನು ಕೊಡುತ್ತಿದ್ದಾರೆ. ಅದರ ಮೇಲಿದ್ದ ಸಂಪೂರ್ಣ ತೆರಿಗೆಯನ್ನು ಮಹಾರಾಷ್ಟ್ರದಲ್ಲಿ ತೆಗೆದು ಹಾಕಿದ್ದಾರೆ. ಇದನ್ನು ನಮ್ಮ ಸರ್ಕಾರ ಏಕೆ ಅನುಕರಣೆ ಮಾಡಬಾರದು ? ಯಾವುದೇ ಬಿಡಿ ಭಾಗಗಳ ಮೇಲೆ ಅಥವಾ ಮಿಷನರಿ ಮೇಲೆ ಟ್ಯಾಕ್ಸನ್ನು ಹಾಕದೇ ಇದ್ದರೆ, ಸುಲಭವಾಗಿ ರೈತರು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಸಬ್ಸಿಡಿ ಸಹಿತ ಕಡಿಮೆ ಪ್ರಮಾಣದಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಾವು ಒಂದು ಕಡೆ ಬಹಳ ಪರಿಹಾರ ಕೊಡುತ್ತೇವೆ, ಸಹಾಯ ಮಾಡುತ್ತೇವೆ ಎಂದು ಹೇಳುತ್ತಾ, ಇನ್ನೊಂದು ಕಡೆ ಅಪ್ರತ್ಯಕ್ಷವಾಗಿ ತೊಂದರೆ ಕೊಡುತ್ತಾ ಅಥವಾ ಟ್ಯಾಕ್ಸ್ ರೀತಿಯಿಂದ ವಸೂಲ್ಮಾಡುತ್ತಾ ಹೋಗತಕ್ಕ ಕೆಲಸ ಸರಿಯಲ್ಲ. ಇದರ ಬಗ್ಗೆ ನೇರವಾದ, ಸ್ಪಷ್ಟವಾದಂಥ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯಸರ್ಕಾರಕ್ಕೆ ಬರಬೇಕಾದ ಆದಾಯ ಬೇರೆ ಸರ್ಕಾರಗಳಿಗೆ ಹೊರಟು ಹೋಗುತ್ತಿದೆ. ನಾವು ಎಷ್ಟೆಷ್ಟು ತೆರಿಗೆಯನ್ನು

ಹೆಚ್ಚು ಮಾಡುತ್ತಾ ಹೋಗುತ್ತೇವೆ, ಅಷ್ಟಷ್ಟು ಆದಾಯ ನಮಗೆ ಕಡಿಮೆಯಾಗುತ್ತಾ ಹೋಗುತ್ತದೆ. ಸಾಧ್ಯವಿದ್ದಷ್ಟು ಕಡಿಮೆ ತೆರಿಗೆಯನ್ನು ಹಾಕಿ ಪ್ರಾಮಾಣಿಕತೆಯಿಂದ ಇದನ್ನು ವಸೂಲ್ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಸನ್ಮಾನ್ಯ ಉಪಾಧ್ಯಕ್ಷರೇ, ಅನೇಕ ಯುವಕರು, ಅವರಿಗೆ ಬೇಕಾದ ಮೋಟಾರ್ ಸೈಕಲ್ ಇತ್ಯಾದಿ ತರುವುದಕ್ಕೆ ಗೋವಾಕ್ಕೆ ಹೋಗಿ ಬರುತ್ತಾರೆ. ನಮ್ಮ ರಾಜ್ಯಕ್ಕೂ ಆ ರಾಜ್ಯಕ್ಕೂ ಇರತಕ್ಕ ತೆರಿಗೆಯನ್ನು ಹೋಲಿಸಿದರೆ, ಇಲ್ಲಿ ಈಗಾಗಲೇ ಜಾಸ್ತಿ ಇದೆ. ಈ ರೀತಿ ವ್ಯತ್ಯಾಸವಾಗುತ್ತಿರುವುದನ್ನು ನೋಡಿದರೆ, ನಮ್ಮ ರಾಜ್ಯಸರ್ಕಾರ ಈ ಕಡೆ ಗಮನಕೊಟ್ಟು, ಇಲ್ಲಿ ತೆರಿಗೆ ಕಡಿಮೆಯಾದರೆ, ಬೇರೆ ಬೇರೆ ಕಡೆಯಿಂದ ಬಂದ ಟ್ರಾನ್ಸ್ಯಾಕ್ಷನ್ ಜಾಸ್ತಿಯಾಗಿ ಸ್ವಾಭಾವಿಕವಾಗಿ ನಮಗೆ ಲಾಭ ಜಾಸ್ತಿ ಬರುತ್ತದೆ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡುವುದಕ್ಕೆ ಸರ್ಕಾರ ಏಕೆ ಹಿಂದೆ ಮುಂದೆ ನೋಡುತ್ತಿದೆಯೋ ಗೊತ್ತಾಗುತ್ತಿಲ್ಲ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

†ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):– ಸನ್ಮಾನ್ಯ ಉಪಾಧ್ಯಕ್ಷರೇ, ಈ ಕರ್ನಾಟಕ ಪ್ರವೇಶ ತೆರಿಗೆಗೆ ಸಂಬಂಧಪಟ್ಟ ಮಸೂದೆ 1987ರಲ್ಲಿ ಸನ್ಮಾನ್ಯ ರಾಷ್ಟ್ರಾಧ್ಯಕ್ಷರಿಗೆ ಮಂಜೂರಾತಿಗಾಗಿ ಹೋಗಿತ್ತು. ಈ ರೀತಿ ಹೋದಾಗ, ಕೇಂದ್ರ ಸರ್ಕಾರ ಈ ಮಸೂದೆಯನ್ನು ಹಿಂದೆ ಕಳುಹಿಸಿ, ಯಾವ ಒಂದು ಬಾಬುಗಳನ್ನು ನಾವು ಪ್ರವೇಶ ತೆರಿಗೆಗಾಗಿ ಸೇರಿಸುತ್ತೇವೆ, ಅವುಗಳನ್ನು ಷೆಡ್ಯೂಲ್ – 1 ಎಂದು ಮಾಡಿ, ನಮೂದಿಸಿಯೇ ಕಾನೂನು ಮಾಡಬೇಕೆಂದು ಸಲಹೆ ಸೂಚನೆ ಕೊಟ್ಟಿದ್ದರಿಂದ, ಫಸ್ಟ್ ಷೆಡ್ಯೂಲ್ ಸೇರಿಸಿ, ಇದಕ್ಕೆ 103 ಐಟಂಗಳನ್ನು ನಾವು ಸೇರಿಸಿ, ಈ ಮಸೂದೆಗಾಗಿ ರಾಷ್ಟ್ರಾಧ್ಯಕ್ಷರು ಏನು ನಿರ್ದೇಶನ ಕೊಟ್ಟಿದ್ದಾರೆ, ಆ ಪ್ರಕಾರ ನಾವು ಮಾಡಿದ್ದೇವೆ. ಆದ್ದರಿಂದ, ಇದು ಹೊಸದಾದ ಮಸೂದೆ ಅಲ್ಲ. ಈ ಸದನಕ್ಕೆ 1987ರಲ್ಲಿಯೇ ಈ ಮಸೂದೆ ಬಂದಿತ್ತು. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಚರ್ಚೆಯಾಗಿ ಮಂಜೂರಾಗಿದೆ. ತಾಂತ್ರಿಕ ಕಾರಣಗಳಿಂದ ಮಾತ್ರ ಪುನಃ ಇಲ್ಲಿ ಬರಬೇಕಾದ ಅವಶ್ಯಕತೆ ಇದೆ. ಇಲ್ಲಿ ಮಂಜೂರಾತಿಯಾದ ಮೇಲೆ ಪುನಃ ಹೋಗುತ್ತದೆ. ಈ ಷರತ್ತುಗಳಿಗೆ ಒಳಪಟ್ಟು, ಅವರು ಮಂಜೂರಾತಿ ಮಾಡಿದ್ದಾರೆ. ಇದನ್ನು ತಿದ್ದುಪಡಿ ಮಾಡಿ, ಪಾಸ್ ಮಾಡಿದರೆ, ರಾಜ್ಯಪಾಲರ ಸಹಿ ಆದ ಮೇಲೆ ಇದು ಕಾನೂನಾಗಿ ಪರಿವರ್ತನೆಯಾಗುತ್ತದೆ. ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ಬೈರೇಗೌಡರು ಮತ್ತು ಸನ್ಮಾನ್ಯ ಬನ್ನಿಕೋಡ್‌ರವರೂ ಕೂಡ ಕೆಲವು ಸಲಹೆ ಸೂಚನೆಯನ್ನು ಕೊಟ್ಟಿದ್ದಾರೆ, ಅವರು ಹೇಳಿದ್ದಾರೆ, ಆದರಲ್ಲಿ ಒಂದು ಮಾತನ್ನು ಒಪ್ಪುತ್ತೇನೆ. ಏಕೆಂದರೆ, ಒಮ್ಮೆ ನಾವು ಆಯವ್ಯಯದ ಮಂಡನೆ ಮಾಡಿದ ಸಂದರ್ಭದಲ್ಲಿ ಅಥವಾ ನಾವು ತೆರಿಗೆಯನ್ನು ಹೊರಿಸತಕ್ಕ ಮಸೂದೆಯನ್ನು ಮಾಡಿದ ಮೇಲೆ, ಏತನ್ಮಧ್ಯೆ, ಯಾವುದೇ ಒಂದು ಆಡಳಿತ ಕಾರಣಕ್ಕೇ ಅಲ್ಲದೆ, ಅಥವಾ ರಾಜ್ಯದ ಹಿತಾಸಕ್ತಿಗಳಿಗೆ ಸಲ್ಲತಕ್ಕ ಮಾರ್ಪಾಡನ್ನು ತಿದ್ದುಪಡಿ ಮಾಡತಕ್ಕಂಥಾದ್ದು, ಪ್ರೊಪ್ರೈಟಿ ಆಗಿ ಸರಿಯಲ್ಲ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಅಂತಹ ಯಾವುದೇ ಒಂದು ಪರಿಸ್ಥಿತಿ ಆದು ರಾಜ್ಯದ ಬೊಕ್ಕಸಕ್ಕೆ ಆದರಿಂದ ತೊಂದರೆ ಬರುವಂಥಾದಿದ್ದರೆ ಅಂತಹ ಕೆಲಸ ಮಾಡುವುದಕ್ಕೆ ನಮ್ಮ ಸರ್ಕಾರ ಖಂಡಿತವಾಗಿಯೂ ಹೋಗುವುದಿಲ್ಲ ಎನ್ನುವ ಭರವಸೆಯನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಎರಡನೆಯ ವಿಚಾರ, ನಾನು ಈ ವಿಷಯವಾಗಿ ಎಲ್ಲವನ್ನೂ ಹೇಳುವುದಿಲ್ಲ. ಈ ಐಟಂಗಳು ಬಹಳ ಸರಿಯಾಗಿವೆ ಎಂಬ ಮಾತು ಅಲ್ಲ. ಏಕೆಂದರೆ, ನಾವು ಬಜೆಟ್ ಎಕ್ಸರ್‌ಸೈಸ್ ಮಾಡುವಾಗ, ಇದನ್ನು ಖಂಡಿತವಾಗಿಯೂ ಪುನರ್ ವಿಮರ್ಶೆ ಮಾಡುತ್ತೇವೆ. ಈ ರೀತಿ ಪುನರ್ ವಿಮರ್ಶೆ ಮಾಡುವಾಗ ಯಾವುದೇ ಒಂದು ವಿಚಾರದಲ್ಲಿ, ಆರ್ಥಿಕ ಸಿದ್ಧಾಂತದಲ್ಲಿ ನಂಬಿಕೆ ಇರಬೇಕು. ಅದೇನೆಂದರೆ, ಯಾವುದೊಂದು ತೆರಿಗೆ ಹೊರಿಸುವುದಿದ್ದರೆ,

ಉತ್ಪಾದನಾ ಕ್ಷೇತ್ರಕ್ಕೆ ಆಘಾತವಾಗಬಾರದು. ನಮ್ಮ ರಾಜ್ಯದ ಉತ್ಪಾದನಾ ಕ್ಷೇತ್ರಕ್ಕೆ ಆಘಾತವಾದಾಗ, ಬರತಕ್ಕ ತೆರಿಗೆ, ಅದು ನಕಾರಾತ್ಮಕವಾದ ತೆರಿಗೆಯಾಗುತ್ತದೆ.

ಅದರಿಂದ ರಾಜ್ಯಕ್ಕೆ ಪ್ರಯೋಜನ ಬರುವುದಿಲ್ಲ ಅಥವಾ ಉತ್ಪಾದನಾ ಕ್ಷೇತ್ರ ಕೂಡ ಸಂಪನ್ನವಾಗುವುದಿಲ್ಲ. ಮೂರನೆಯದಾಗಿ ಅದರಿಂದ ಜನಗಳಿಗೂ ಕೂಡ ಹೆಚ್ಚು ಪೀಡನೆ, ತೊಂದರೆ ಆಗುತ್ತದೆ. ನನ್ನ ಉದ್ದೇಶ ಎಲ್ಲಿ ಇಂತಹ ಒಂದು ಪರಿಸ್ಥಿತಿ ಬರುತ್ತದೆ, ಎಲ್ಲಿ ಕಡಿಮೆ ತೆರಿಗೆ ಬರುತ್ತದೆ, ಆದರೆ ಹೆಚ್ಚು ಜನರಿಗೆ ಪೀಡನೆಯಾಗುತ್ತದೆ, ಅಂತಹ ತೆರಿಗೆಯಿಂದ ಯಾವ ಪ್ರಯೋಜನ ಬರುವುದಿಲ್ಲ. ಅದನ್ನೆಲ್ಲಾ ಸ್ವಲ್ಪ ನಾವು ರೇಷನಲೈಸ್ ಮಾಡಿ ಸರಿಪಡಿಸತಕ್ಕ ಕೆಲಸ ಖಂಡಿತಾ ಮಾಡುತ್ತೇವೆ. ನಾವು ಯಾವಾಗಲೂ ಒಂದು ಮಾತನ್ನು ಆಡುತ್ತಲೇ ಇದ್ದೇವೆ. ಎಲ್ಲಾ ಹಣಕಾಸಿನ ಸಚಿವರೂ ಒಂದು ಮಾತನ್ನು ಹೇಳುತ್ತಾರೆ. ಕೊನೆಯ ಪಕ್ಷ ನೆರೆಕರೆಯ ರಾಜ್ಯ ಅಥವಾ ದಕ್ಷಿಣ ಭಾರತದಲ್ಲಿ ಸಾಧಾರಣವಾಗಿ ಒಂದೇ ರೀತಿಯ ಯೂನಿಫಾರ್ಮಿಟಿ ಬಂದರೆ ಒಳ್ಳೆಯದು ಎಂದು ಹೇಳುತ್ತಾರೆ. ಅಲ್ಲಿ ಸಾಕಷ್ಟು ಕಡಿಮೆ ಟ್ಯಾಕ್ಸ್ ಇದ್ದು ನಮ್ಮಲ್ಲಿ ಹೆಚ್ಚು ಇದ್ದರೆ ವ್ಯಾಪಾರವೆಲ್ಲ ಅಲ್ಲಿಗೆ ಹೋಗುತ್ತದೆ. ಆದರಿಂದ ಹೆಚ್ಚು ತೆರಿಗೆ ಬರುವುದಿಲ್ಲ. ಸನ್ಮಾನ್ಯ ಬೈರೇಗೌಡರು ಹೇಳಿದ ಹಾಗೆ, ಮೋಟಾರ್ ವೆಹಿಕಲ್ಸ್ ಇರಬಹುದು, ಬೇರೆ ಬೇರೆ ಟ್ಯಾಕ್ಸ್‌ಸ್ ಇರಬಹುದು, ಇದರಲ್ಲಿ ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ ಪ್ಯಾರಿಟಿ ಮಾಡಬೇಕಾದ ಅವಶ್ಯಕತೆ ಇದೆ. ಇದು ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುತ್ತದೆ, ಪಾಂಡಿಚೇರಿ ಮತ್ತು ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುತ್ತದೆ. ನೆರೆಕರೆಯ ರಾಜ್ಯಕ್ಕೆ ಅನ್ವಯವಾಗುತ್ತದೆ. ತಾವು ಏನು ಸಲಹೆ ಕೊಡುತ್ತಿದ್ದೀರಿ ಅದಕ್ಕೆ ಖಂಡಿತವಾಗಿ ಸ್ಪಂದಿಸುತ್ತೇವೆ. ಮತ್ತು ಆ ಸಲಹೆ ಹಾಗೂ ವಿಚಾರಗಳನ್ನು ಬಜೆಟ್ ಅಂದರೆ ಆಯವ್ಯಯದ ಒಂದು ಎಕ್ಸ್‌ರ್‌ಸೈಸ್ ಮಾಡುವಾಗ ಗಮನದಲ್ಲಿ ಇಟ್ಟುಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ರಾಜಶೇಖರ ಮೂರ್ತಿಯವರು ಹಣಕಾಸಿನ ಸಚಿವರಾಗಿದ್ದಾಗ ಪಕ್ಕದ ರಾಜ್ಯದ ಜೊತೆಗೆ ಇದರ ಬಗ್ಗೆ ಮಾತನಾಡಬೇಕೆಂದು ಉದ್ದೇಶಪಟ್ಟಿದ್ದರು. ಆಗ ಅದು ಆಗಲಿಲ್ಲ. ಈಗಲಾದರೂ ಅದನ್ನು ಕಾರ್ಯರೂಪಕ್ಕೆ ಆದಷ್ಟು ಬೇಗ ತರುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾತುಕತೆ ಒಂದು ಭಾಗ, ಇನ್ನೊಂದು ಭಾಗ ಎಂದರೆ ನಮಗೆ ಸಾಕಷ್ಟು ಅಂಕಿಸಂಖ್ಯೆಗಳ ಮಾಹಿತಿ ಇದೆ. ಎಷ್ಟು ವ್ಯತ್ಯಾಸ ಇದೆ ಎಂದು ಮಾಹಿತಿ ಇದೆ. ಈ ಮಾಹಿತಿಯ ಆಧಾರದ ಮೇಲೆ ವ್ಯವಸ್ಥಿತ ರೂಪವಾಗಿ ಮಾಡಿದರೆ ಬಹುಶಃ ನಮಗೆ ಒಟ್ಟು ತೆರಿಗೆ ಜಾಸ್ತಿ ಏನು ವಸೂಲಿ ಮಾಡಬೇಕು ಅದು ಜಾಸ್ತಿಯಾಗುತ್ತದೆ. ಆದರಿಂದ ತೆರಿಗೆ ನಷ್ಟವಾಗುವುದಿಲ್ಲ. ಆದುದರಿಂದ ಈ ದಿಸೆಯಲ್ಲಿ ಖಂಡಿತವಾಗಿ ನಾವು ಪರಿಶೀಲನೆ ಮಾಡುತ್ತೇವೆ, ತಾವು ಏನು ಸಲಹೆ ಕೊಟ್ಟಿದ್ದೀರಿ, ಆ ಸಲಹೆಯನ್ನು ಗಂಭೀರವಾಗಿ ಗ್ರಹಿಸಿ ಅದರ ಬಗ್ಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ, ಆ ಒಂದು ಷರತ್ತಿಗೆ ಒಳಪಟ್ಟು ಈ ಮಸೂದೆಯನ್ನು ಮಂಜೂರು ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ತಾವು ಬಹಳ ಫ್ರಾಂಕ್ ಆಗಿ ಒಪ್ಪಿಕೊಂಡಿದ್ದೀರಿ. ಇದರಲ್ಲಿ 103 ಐಟಮ್ಸ್ ಇದ್ದರೂ ಸಹ ಆ ಎಲ್ಲಾ 103 ಐಟಮ್ಸ್ ಮೇಲೆ ಎಂಟ್ರಿ ಟ್ಯಾಕ್ಸ್ ಹಾಕದೆ ರಾಜ್ಯದ ಬೊಕ್ಕಸದ ಹಿತದೃಷ್ಟಿಯಿಂದ ಎಲ್ಲಿ ಅನುಕೂಲವಾಗುತ್ತದೆ ಅಲ್ಲಿ ಹಾಕುತ್ತೇವೆ ಎಂದು ಹೇಳಿದಿರಿ. ಇದನ್ನು ಹಾಕುವಾಗ ಸಾಮಾನ್ಯ ಜನರಿಗೆ ಕಷ್ಟವಾಗಬಾರದು, ಸಾಮಾನ್ಯ ಜನರಿಗೆ ಹ್ಯರಾಸ್‌ಮೆಂಟ್ ಆಗಬಾರದು, ಟ್ಯಾಕ್ಸ್ ಕಲೆಕ್ಷನ್‌ಗಿಂತ ಹ್ಯರಾಸ್‌ಮೆಂಟ್ ಜಾಸ್ತಿಯಾದರೆ, ನಿಮಗೂ

ತೊಂದರೆಯಾಗುತ್ತದೆ, ತಮ್ಮ ಸರಕಾರಕ್ಕೂ ಕೂಡ ತೊಂದರೆಯಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ಹೇಳುತ್ತೇನೆ. ಎರಡನೆಯದು ನೆರೆ ರಾಜ್ಯದ ಆರ್ಥಿಕ ಸಚಿವರುಗಳ ಸಭೆಗಳು ಬಹಳಷ್ಟು ಆಗಿವೆ, ಆಗಿಲ್ಲ ಎಂದು ಅಲ್ಲ, ನಮ್ಮ ಕಾಲದಲ್ಲೂ ಆಗಿವೆ, ನಿಮ್ಮ ಕಾಲದಲ್ಲೂ ಆಗಿವೆ, ಆದರೆ ಪರಿಹಾರ ಕಂಡುಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಪ್ರತಿಯೊಂದು ರಾಜ್ಯಗಳೂ ತಮ್ಮ ತಮ್ಮ ಇಂಟರೆಸ್ಟ್ ನೋಡುತ್ತವೆ. ಅದಕ್ಕೆ ಕೇಂದ್ರ ಆರ್ಥ ಸಚಿವರ ಸಹಾಯವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ. ತೆಗೆದುಕೊಂಡು ಯೂನಿಫಾರ್ಮಿಟಿ ತರುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ನಮ್ಮ ಬೊಕ್ಕಸದ ಮೇಲೆ ಯಾವುದೇ ರೀತಿಯ ಪರಿಣಾಮವಾಗಬಾರದು, ಆ ರೀತಿಯಲ್ಲಿ ನೋಡಿ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ, "1992ನೇ ಇಸವಿಯ ಕರ್ನಾಟಕ ಸರಕುಗಳ ಮೇಲಿನ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು."

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 4

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ "ಖಂಡ 2ರಿಂದ 4 ತಿದ್ದುಪಡಿ ಮಾಡಲ್ಪಟ್ಟಂತೆ ವಿಧೇಯಕದ ಅಂಗವಾಗಿರುತ್ತವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ರಿಂದ 4 ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ – 5

ಉಪಾಧ್ಯಕ್ಷರು:– ಮಾನ್ಯ ಮಂತ್ರಿಗಳು ಖಂಡ 5ಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಅವರು ಅದನ್ನು ಮಂಡಿಸಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ:–

CLAUSE – 5

For subclause (1) of clause 5 of the said Bill, the following shall be substituted, namely:–

"(1) The Karnataka Tax on Entry of Goods (Amendment) (No. 2) Ordinance, 1992 (Karnataka Ordinance No. 10 of 1992) is hereby repealed"

ಉಪಾಧ್ಯಕ್ಷರು:– ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷರೇ ಅವರು ತಿದ್ದುಪಡಿಯನ್ನು ಇವತ್ತು ಮಂಡಿಸಿದ್ದಾರೆ. ತಿದ್ದುಪಡಿಯನ್ನು ಮಂಡಿಸುವಾಗ ತಾವು ಈ ಪಟ್ಟಿಯನ್ನು ನೋಡಿ. ದಯವಿಟ್ಟು, ಪಟ್ಟಿಯಲ್ಲಿರತಕ್ಕಂಥ ಐಟಂಗಳಲ್ಲಿ ನಾನು ಈಗಾಗಲೇ ಹೇಳಿದೆ. ರೇಷ್ಮೆ ಮೇಲೆ ಹಾಕಿದ್ದಾರೆ. ಆಮೇಲೆ ಪೈಪ್ಸ್, ಫಿಟ್ಟಿಂಗ್ಸ್ ಮೇಲೆ ಹಾಕಿದ್ದಾರೆ. ಇದನ್ನೆಲ್ಲಾ ತಾವು ಈ ತಿದ್ದುಪಡಿಯಲ್ಲೇ ತನ್ನಿ. ಇದನ್ನೆಲ್ಲಾ ವಜಾ ಮಾಡಿದ್ದೇವೆಂದು.

ಶ್ರೀ ಎಂ. ವೀರಪ್ಪಮೊಯಿಲಿ:– ಅದು ಪಾಸಾಗಿ ಹೋಯಿತು. ಈಗ ಖಂಡ 5ಕ್ಕೆ ತಿದ್ದುಪಡಿ ಏನೆಂದರೆ ನಾವು ಆರ್ಡಿನೆನ್ಸ್ ಇಷ್ಯೂ ಮಾಡಿದ್ದೆವು ಅದು ರಿಪೀಲ್ ಮಾಡಿದ್ದುದು ಅಷ್ಟೇ. ಒಂದು ವಿಷಯ ತಾವು ಇಲ್ಲಿ ಏನು ಸೂಚನೆ ಕೊಟ್ಟಿದ್ದಿರಿ ಅದಕ್ಕೆ ನಾನು ಉತ್ತರ ಹೇಳಿದ್ದೇನೆ. ನಾನು ಉತ್ತರ ಕೊಡುವಾಗ ಬಹುಶಃ ತಮ್ಮ ಗಮನ ಬೇರೆ ಕಡೆ ಇತ್ತು ಎಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ:– ನೀವು ಬಜೆಟ್ ತಯಾರು ಮಾಡುವಾಗ ಇದನ್ನೆಲ್ಲಾ ಗಮನಿಸುತ್ತೇವೆಂದು ಹೇಳಿದಿರಿ. ಅದೂ ತೀವ್ರವಾಗಿ ಗಮನಿಸಿ ಖಂಡಿತವಾಗಿ ಮಾಡುತ್ತೇವೆಂದು ಹೇಳಿದಿರಿ. ಇದೇ ಮಾತನ್ನು ಪ್ರತಿ ಸಾರಿ ಪ್ರತಿ ಅರ್ಥ ಮಂತ್ರಿಗಳು ಹೇಳಿಕೊಂಡು ಬಂದಿದ್ದಾರೆ. ಹಿಂದೆ ಮಾನ್ಯ ಬಂಗಾರಪ್ಪನವರು ಇದ್ದಾಗಲೂ ಕೂಡ ಅವರ ಗಮನಕ್ಕೆ ಇದೇ ರೀತಿ ತಂದಾಗ ಇದೇ ರೀತಿ ಅವರು ಹೇಳಿದರು. ತಾವೇನು ಉತ್ತರ ಕೊಟ್ಟಿದ್ದೀರಿ ಅದೇ ಮಾತನ್ನು ಹೇಳಿದರು. ಮಾನ್ಯ ರಾಜಶೇಖರ ಮೂರ್ತಿಯವರು ಇದ್ದಾಗ ನನ್ನದೆ ಉದಾಹರಣೆ ಕೊಟ್ಟು ಹೇಳಿದೆ. ಅವರೂ ಕೂಡ ಇದೇ ಮಾತನ್ನು ಹೇಳಿದರು.

ಶ್ರೀ ಎಂ. ವೀರಪ್ಪಮೊಯಿಲಿ:– ಆಗ ಈ ಐಟಂ ಇರಲಿಲ್ಲ.

ಶ್ರೀ ಸಿ. ಬೈರೇಗೌಡ:– ಇದರಲ್ಲಿ ನಾನು ಹೇಳಿದಂತಹ ವಿಶಿಷ್ಟ ಐಟಂಗಳು ಇವೆ. ದಯವಿಟ್ಟು ಇದನ್ನು ವಜಾ ಮಾಡಿ ರೈತರಿಗೆ ಸೌಲತ್ತುಗಳನ್ನು ನೀವು ಕೊಡತಕ್ಕಂಥಾದ್ದಕ್ಕೆ ಬದ್ಧರಾಗಿದ್ದೀರಿ ಇದನ್ನು ವಜಾ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಹಿರಿಯ ಸದಸ್ಯರು ಹೇಳಿದರು ಈಗ ಏನಾಗಿದೆ ನಾನು ಈಗಾಗಲೇ ಹೇಳಿದೆ. ರೈತರ ಹಿತಾಸಕ್ತಿ, ತೆರಿಗೆದಾರರಿಗೆ ಅನಾವಶ್ಯಕವಾಗಿ ಪೀಡನೆ ಕೊಡುವಂತಹ ಯಾವ ಯಾವ ವಿಚಾರಗಳು ಇವೆ ಅದರ ಬಗ್ಗೆ ನಾವು ಬಜೆಟ್ ತಯಾರು ಮಾಡುವಾಗ ಒಂದು ರೀತಿಯಾದ ವ್ಯಾಯಾಮ ಮಾಡಿ ಇದನ್ನು ಸರಿಪಡಿಸತಕ್ಕಂಥಾದ್ದಕ್ಕೆ ನಾವು ಯಾವಾಗಲೂ ಸಿದ್ಧವಾಗಿದ್ದೇವೆ ಅಂತ ಹೇಳಿದ ಮೇಲೂ ಕೂಡ ಇದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ:– ಬೈಬಲ್ ಅಲ್ಲ ಅದು.

ಶ್ರೀ ಎಂ. ವೀರಪ್ಪಮೊಯಿಲಿ:– ಇದೇನು ಅಂತಿಮ ವಾಕ್ಯ ಅಲ್ಲ. ಇನ್ನೂ ಸಂಭಾಷಣೆ ನಡೆಯುತ್ತದೆ ಹೆಚ್ಚು ಕಡಿಮೆ ಆಗಬಹುದು.

ಶ್ರೀ ಬಿ.ಎಚ್. ಬನ್ನಿಕೋಡ್:– ಬಜೆಟ್ ಬರುತ್ತಿದೆ. ಆದ್ದರಿಂದ ಇದನ್ನು ಈಗಲೇ ಪಾಸ್ ಮಾಡಿಸಿಕೊಳ್ಳತಕ್ಕಂಥ ಅವಶ್ಯಕತೆ ಆತುರ ಏನಿದೆ ? ಅದರ ಅವಶ್ಯಕತೆಯಾದರೂ ಏನಿದೆ ? ಇದನ್ನೇ ಅಲ್ಲಿಯವರೆಗೂ ಮುಂದುವರಿಸಬಹುದಾಗಿತ್ತು.

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ ಮಾನ್ಯ ಮಂತ್ರಿಗಳು ಖಂಡ 5ಕ್ಕೆ ತಂದಿರತಕ್ಕಂಥ ತಿದ್ದುಪಡಿ ಈ ರೀತಿ ಇದೆ.

For sub–clause (1) of clause 5 of the said Bill, the following shall be substituted, namely –

"(1) The Karnataka Tax on Entry of Goods (Amendment) (No. 2) Ordinance, 1992 (Karnataka Ordinance No. 10 of 1992) is hereby repealed."

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು. ಖಂಡ 5 ತಿದ್ದುಪಡಿಯಾದಂತೆ ..... ಅಂಗೀಕರಿಸಲ್ಪಟ್ಟಿತು.

ಖಂಡ 1 ಇತ್ಯಾದಿ:–

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ 1992 ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ, "1992ರ ಕರ್ನಾಟಕ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ 1992

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ 1992ರ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು:– ಪ್ರಸ್ತಾವ ಏನೆಂದರೆ 1992ರ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷಿಣಿಯವರೆ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಿಣಿಯವರು:– ವಿಧೇಯಕವನ್ನು ಮಂಡಿಸಲಾಯಿತು.*

1992 ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ ಪರ್ಯಾಲೋಚನ ಪ್ರಸ್ತಾವ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷಿಣಿಯವರೆ 1992ರ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

---

* Annexure